

بِسۡمِ اللّٰہِ الرَّحۡمٰنِ الرَّحِیۡمِ

# ಜಮಾಅತಿನ ಹುದ್ದೇದಾರರು ತಮ್ಮ ಕರ್ತವ್ಯಗಳ ಕಡೆಗೆ ಗಮನ ಹರಿಸುವ ಬಗ್ಗೆ ಉಪಯುಕ್ತ ನಿರ್ದೇಶಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **15–07–2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್‌ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಈ ವರ್ಷ ಜಮಾಅತ್‌ನಲ್ಲಿ ಚುನಾವಣೆಗಳ ವರ್ಷವೆಂದು ನಾನು ಸ್ವಲ್ಪ ಸಮಯದ ಹಿಂದೆ ಹೇಳಿದ್ದೆನು. ಈಗ ಬಹುತೇಕ ಜಮಾಅತ್‌ಗಳಲ್ಲಿ ಹುದ್ದೇದಾರರ ಚುನಾವಣೆ ನಡೆದಿದೆ. ದೇಶಗಳಲ್ಲೂ ಪ್ರಾದೇಶಿಕವಾಗಿಯೂ ಹೊಸ ಹುದ್ದೇದಾರರು ತಮ್ಮ ಕೆಲಸವನ್ನು ವಹಿಸಿಕೊಂಡಿದ್ದಾರೆ. ಹೊಸದಾಗಿ ನೇಮಕಗೊಂಡವರು ಸಹ ಜಮಾಅತಿನ ಸೇವೆಗೋಸ್ಕರ ಅಲ್ಲಾಹನು ಅವರನ್ನು ಆಯ್ಕೆ ಮಾಡಿದ ಬಗ್ಗೆ ಅವರು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತಾ ಅವನ ಮುಂದೆ ವಿನಯದಿಂದ ಬಾಗಿಕೊಂಡು ಅವನ ಸಹಾಯವನ್ನು ಬೇಡಿಕೊಳ್ಳಬೇಕು. ಅವರಿಗೆ ವಹಿಸಿಕೊಟ್ಟ ಹುದ್ದೆ ಎಂಬ ಅಮಾನತ್‌ಗೆ ಸಂಬಂಧಿಸಿ ಹೊಣೆಗಾರಿಕೆಗಳನ್ನು ಈಡೇರಿಸುವ ಭಾಗ್ಯ ಅಲ್ಲಾಹನು ಅವರಿಗೆ ನೀಡಲಿ ಎಂದು ಪ್ರಾರ್ಥಿಸಬೇಕು. ಯಾವ ಹುದ್ದೇದಾರರು ಪುನಃ ಚುನಾಯಿಸಲ್ಪಟ್ಟಿರುವರೋ ಅವರು ಸಹ ಜಮಾಅತಿಗೆ ಸೇವೆ ಸಲ್ಲಿಸುವ ಭಾಗ್ಯ ಅಲ್ಲಾಹನು ತಮಗೆ ಪುನಃ ನೀಡಿದುದಕ್ಕೆ ಕೃತಜ್ಞತೆ ಅರ್ಪಿಸಬೇಕು. ಅವರು ವಿನಯದಿಂದ ಅಲ್ಲಾಹನೊಂದಿಗೆ ಪ್ರಾರ್ಥಿಸಬೇಕು. ಅವರು ತಮ್ಮ ಎಲ್ಲ ಸಾಮರ್ಥ್ಯದೊಂದಿಗೆ ತಮಗೆ ವಹಿಸಿಕೊಟ್ಟ ಹುದ್ದೆ ಎಂಬ ಅಮಾನತ್‌ಗೆ ಸಂಬಂಧಿಸಿದ ಕರ್ತವ್ಯವನ್ನು ನಿರ್ವಹಿಸುವ ಭಾಗ್ಯ ಅಲ್ಲಾಹನು ಅವರಿಗೆ ನೀಡಲಿ. ಕಳೆದ ಸಾರಿ ಸೇವೆ ಸಲ್ಲಿಸುವಾಗ ಅವರಿಂದ ಸಂಭವಿಸಿದ ಕುಂದುಕೊರತೆಗಳು, ಉದಾಸೀನತೆಗಳು, ನಿರ್ಲಕ್ಷ್ಯತೆಗಳು ಮೊದಲಾದುವುಗಳಿಂದ ಅವರಿಗೆ ವಹಿಸಿಕೊಟ್ಟ ಕೆಲಸಗಳನ್ನು ಸರಿಯಾಗಿ ನಿಭಾಯಿಸಲು ಸಾಧ್ಯವಾಗಿರದಿದ್ದರೆ ಅಲ್ಲಾಹನು ಅವುಗಳನ್ನು ಕಡೆಗಣಿಸಿ ತಮ್ಮ ಕರ್ತವ್ಯಗಳನ್ನು ಸರಿಯಾದ ರೀತಿಯಲ್ಲಿ ನಿಭಾಯಿಸಲು ಅಲ್ಲಾಹನು ಅವರಿಗೆ ಸಹಾಯ ನೀಡಲಿ. ಅವರಿಗೆ ಪುನಃ ಮೂರು ವರ್ಷ ಸೇವೆ ಮಾಡುವ ಅನುಗ್ರಹ ಅಲ್ಲಾಹನು ನೀಡಿರುವನು. ಅವರಿಗೆ ವಹಿಸಿಕೊಟ್ಟ ಅಮಾನತ್‌ಗಳಿಗೆ ಸಂಬಂಧಿಸಿ ಉದಾಸೀನತೆಗಳು, ಕುಂದುಕೊರತೆಗಳು ಮತ್ತು ನಿರ್ಲಕ್ಷ್ಯತೆಗಳು ಮುಂದೆ ಉಂಟಾಗದಿರಲಿ. ಅವರು ತಮಗೆ ವಹಿಸಿಕೊಟ್ಟ ಅಮಾನತ್‌ಗಳಿಗೆ ಸಂಬಂಧಿಸಿದ ಕರ್ತವ್ಯಗಳನ್ನು ಈಡೇರಿಸಲು ಅಲ್ಲಾಹನು ಅವರಿಗೆ ಭಾಗ್ಯ ನೀಡಲಿ.

ನೀವು ನೆನಪಿಡಬೇಕಾದುದೇನೆಂದರೆ ಜಮಾಅತ್ ಬಗ್ಗೆ ಸೇವೆಯನ್ನು ಸಾಮಾನ್ಯ ಸೇವೆ ಎಂದು ಭಾವಿಸಬಾರದು. ವಹಿಸಿಕೊಟ್ಟ ಕೆಲಸಕ್ಕೆ ಲಕ್ಷ್ಯ ನೀಡದೆ ಮೇಲಿಂದ ಮೇಲೆ ಅವುಗಳನ್ನು ನಿರ್ವಹಿಸಿದರೆ ಸಾಕಾಗಲಾರದು. ಯಾವಾಗಲೂ ನೆನಪಿಡಬೇಕಾದುದೇನೆಂದರೆ ನಿಮಗೆ ವಹಿಸಿಕೊಟ್ಟ ಅಮಾನತ್‌ಗಳನ್ನು ನೀವು ಅಂಗೀಕರಿಸಿರುವಿರಿ. ಅವು ನಿಮ್ಮ ಪ್ರತಿಜ್ಞೆಗಳಾಗಿವೆ. ಆದುದರಿಂದ ನೀವು ನಿಮ್ಮ ಅಮಾನತ್‌ಗಳನ್ನು ಮತ್ತು ಪ್ರತಿಜ್ಞೆಗಳನ್ನು ಈಡೇರಿಸಬೇಕು. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಸತ್ಯವಂತರ ಮತ್ತು ತಖ್ವವನ್ನು ಅವಲಂಭಿಸುವವರ ಚಿಹ್ನೆಯಾಗಿ ಹೀಗೆ ಹೇಳಿದ್ದಾನೆ. **ವಲ್ ಮೂಫೂನ ಬಿ ಅಹ್‌ದಿಹಿಮ್ ಇಝಾ ಆಹದೂ.** ಅವರು ಪ್ರತಿಜ್ಞೆ ಮಾಡಿದರೆ ಆ ಪ್ರತಿಜ್ಞೆಯನ್ನು ಅವರು ಈಡೇರಿಸುವವರಾಗಿದ್ದಾರೆ. ಜಮಾಅತಿನ ಕೆಲಸಗಳ ಹೊಣೆಗಾರಿಕೆ ವಹಿಸುವವರ ಮೂಲಭೂತ ವೈಶಿಷ್ಟ್ಯ ಇದು ಆಗಬೇಕಾಗಿದೆ. ಅವರು ಯಾವಾಗಲೂ ಸತ್ಯವನ್ನು ಅವಲಂಬಿಸಿ ತಮ್ಮ ತಖ್ವದ ಮಟ್ಟವನ್ನು ವರ್ಧಿಸುತ್ತಾ ತಮ್ಮ ಕೆಲಸಗಳನ್ನು ಮಾಡಬೇಕು. ಅವರ ಸತ್ಯಸಂಧತೆಯ ಮಟ್ಟದಲ್ಲಿ ಸ್ವಲ್ಪವಾದರೂ ಕೊರತೆ ಇದ್ದರೆ, ಅವರ ತಖ್ವದ ಮಟ್ಟ ಜಮಾಅತಿನ ಸಾಮಾನ್ಯ ವ್ಯಕ್ತಿಗೆ ಅನುಸರಣೆಗೆ ಯೋಗ್ಯವಾದ ಉದಾಹರಣೆ ಆಗಿರದಿದ್ದರೆ ಅವರು ತಮ್ಮ ಪ್ರತಿಜ್ಞೆ ಬಗ್ಗೆ, ತಮ್ಮ ಹುದ್ದೆ ಬಗ್ಗೆ, ತಮ್ಮ ಅಮಾನತ್‌ಗೆ ಸಂಬಂಧಿಸಿದ ಕರ್ತವ್ಯಗಳ ಬಗ್ಗೆ ಲಕ್ಷ್ಯ ನೀಡುವವರಾಗಿರುವುದಿಲ್ಲ. ಆದುದರಿಂದ ಅಮೀರ್‌ಗಳು ಮತ್ತು ಅಧ್ಯಕ್ಷರು ಎಲ್ಲರಿಗಿಂತ ಮೊದಲು ತಮ್ಮನ್ನು ಇತರರು ಅನುಸರಣೆ ಮಾಡುವಂತಹ ಮಾದರಿಯಾಗಬೇಕು. ತಮ್ಮ ಮಜ್ಲಿಸೆ ಆಮಿಲ (ಕಾರ್ಯನಿರ್ವಾಹಕ ಸಮಿತಿ) ಮುಂದೆಯೂ ಜಮಾಅತಿನ ಸದಸ್ಯರ ಮುಂದೆಯೂ ಅವರು ಮಾದರಿಯಾಗಬೇಕು. ತರ್‌ಬಿಯ್ಯತ್ ಸೆಕ್ರೆಟರಿಗಳಿಗೆ ತರಬೇತಿ ನೀಡುವ ಕೆಲಸ ವಹಿಸಿಕೊಡಲಾಗಿದೆ. ತರಬೇತಿ ನೀಡುವ ಕೆಲಸ ಸರಿಯಾದ ರೀತಿಯಲ್ಲಿ ನಡೆಯಬೇಕಾದರೆ ಅದಕ್ಕೆ ಮಾದರಿಯಾದುದು ಇರಬೇಕು. ಯಾರಿಗೆ ಉಪದೇಶ ನೀಡುವ ಕೆಲಸ ವಹಿಸಿ ಕೊಡಲಾಗಿದೆಯೋ ಅವನು ಸ್ವತಃ ಆ ಉಪದೇಶಗಳ ಪ್ರಕಾರ ಕಾರ್ಯನಿರತನಾಗುವವನಾಗಬೇಕು. ಆದುದರಿಂದ ತರ್‌ಬಿಯ್ಯತ್ ಸೆಕ್ರೆಟರಿಗಳು ಜಮಾಅತ್ ಸದಸ್ಯರ ಎದುರಿಗೆ ತಮ್ಮ ಮಾದರಿಯನ್ನು ಸ್ಥಾಪಿಸಬೇಕು. ಜಮಾಅತಿನ ತರಬೇತಿಯ ಹೊಣೆಗಾರಿಕೆ ಅವರ ಮೇಲಿದೆ. ನಾನು ಅನೇಕ ಸಂದರ್ಭಗಳಲ್ಲಿ ಪ್ರಸ್ತಾಪಿಸಿದ್ದೇನೆ. ತರ್‌ಬಿಯ್ಯತ್ ವಿಭಾಗ ಸಕ್ರಿಯವಾದರೆ ಇತರ ವಿಭಾಗಗಳ ಕೆಲಸ ತಾನಾಗಿಯೇ ನಡೆಯುವುದು. ಜಮಾಅತಿನ ವ್ಯಕ್ತಿಗಳ ತರಬೇತಿಯ ಮಟ್ಟ ಉನ್ನತವಾದ ಹಾಗೆ ಜಮಾಅತಿನ ಇತರ ವಿಭಾಗಗಳ ಕೆಲಸ ಸುಲಭವಾಗುವುದು. ಉದಾಹರಣೆಗೆ ಮಾಲ್ ಸೆಕ್ರೆಟರಿಯ ಕೆಲಸ ಸುಲಭವಾಗುವುದು; ಸೆಕ್ರೆಟರಿ ಉಮೂರೆ ಆಮ ಕೆಲಸ ಸುಲಭವಾಗುವುದು; ತಬ್‌ಲೀಗ್ ಸೆಕ್ರೆಟರಿಯ ಕೆಲಸ ಸುಲಭವಾಗುವುದು. ಇದೇ ರೀತಿ ಖಝಾ ವಿಭಾಗದ ಕೆಲಸ ಸಹ ಸುಲಭವಾಗುವುದು. ನಾನು ಬಹುತೇಕ ಮಜ್ಲಿಸೆ ಆಮಿಲದ ಸಭೆಗಳಲ್ಲಿ ವಿವಿಧ ಸ್ಥಳದಲ್ಲಿ ಹೇಳುತ್ತಾ ಇದ್ದೇನೆ. ತರಬೇತಿಯ ಕೆಲಸವನ್ನು ಮೊತ್ತಮೊದಲು ತಮ್ಮ ಮನೆಗಳಲ್ಲಿ ಪ್ರಾರಂಭಿಸಬೇಕು ಎಂದು. ನಾನು ಉದ್ದೇಶಿಸುವುದು ತರ್‌ಬಿಯ್ಯತ್ ಸೆಕ್ರೆಟರಿಯ ಮನೆಯನ್ನು ಮಾತ್ರವಲ್ಲ, ಮಜ್ಲಿಸೆ ಆಮಿಲದ ಪ್ರತಿಯೊಬ್ಬ ಸದಸ್ಯನ ಮನೆಯನ್ನು ಸಹ ನಾನು ಉದ್ದೇಶಿಸಿ ಹೇಳುತ್ತೇನೆ. ಮಜ್ಲಿಸೆ ಆಮಿಲ ಎಲ್ಲರಿಗಿಂತ ಹೆಚ್ಚಿನ ಮಟ್ಟದಲ್ಲಿ ತಮ್ಮನ್ನು ತರಬೇತಿ ಮಾಡಬೇಕು. ಅಮೀರ್ ಜಮಾಅತ್, ಸದರ್ ಜಮಾಅತ್, ಸೆಕ್ರೆಟರಿ ತರ್‌ಬಿಯ್ಯತ್ ಅವರು ಮೊತ್ತ ಮೊದಲು ತಮ್ಮ ಮಜ್ಲಿಸೆ ಆಮಿಲದ ಸದಸ್ಯರನ್ನು ನೋಡಬೇಕು– ಅವರು ಜಮಾಅತ್ ಕಾರ್ಯಕ್ರಮಗಳನ್ನು ಯಾವ ರೀತಿಯಲ್ಲಿ ಕಾರ್ಯರೂಪಕ್ಕೆ ತರುತ್ತಿದ್ದಾರೆಂದು. ಅಲ್ಲಾಹನು ನೀಡಿದ ಮೂಲಭೂತ ಆಜ್ಞೆಗಳನ್ನು, ಎಂದರೆ ಮನುಷ್ಯನ ಸೃಷ್ಟಿಯ ಉದ್ದೇಶದ ಕುರಿತು ಅಲ್ಲಾಹನು ನೀಡಿದ

ಆಜ್ಞೆಗಳನ್ನು, ಮಜ್ಲಿಸೆ ಆಮಿಲದ ಸದಸ್ಯರು ಈಡೇರಿಸುತ್ತಾ ಇದ್ದಾರೆಯೋ ಎಂದು ನೋಡಬೇಕು. ಅವರು ಆ ಆಜ್ಞೆ ಪಾಲಿಸುವುದಿಲ್ಲವಾದರೆ ಅವರಲ್ಲಿ ತಖ್ವ ಸಹ ಇಲ್ಲ ಎಂದರ್ಥ. ಅಲ್ಲಾಹನಿಗೆ ಸಲ್ಲಿಸಬೇಕಾದ ಎಲ್ಲದಕ್ಕಿಂತ ದೊಡ್ಡ ಹಕ್ಕು ಆರಾಧನೆಯದಾಗಿದೆ. ಪುರುಷರಿಗೆ ನೀಡಿದ ಆಜ್ಞೆ ಏನೆಂದರೆ ನಮಾಝುನ್ನು ಸ್ಥಾಪಿಸಿರಿ ಎಂದು. ಇದರ ಅರ್ಥ ಬಾಜಮಾಅತ್ (ಸಾಮೂಹಿಕವಾಗಿ) ನಮಾಝ್ ಅನುಷ್ಠಿಸಬೇಕೆಂದಾಗಿದೆ. ಅಮೀರರು, ಸದರ್‌ಗಳು ಮತ್ತು ಹುದ್ದೇದಾರರು ನಮಾಝ್‌ಗಳನ್ನು ಸಂರಕ್ಷಿಸಿ ಅದರ ಸ್ಥಾಪನೆಗೆ ಮತ್ತು ಬಾಜಮಾಅತ್ ನಮಾಝ್ ಅನುಷ್ಠಿಸುವ ಬಗ್ಗೆ ಪ್ರಯತ್ನ ಮಾಡುತ್ತಾ ಇರಬೇಕು. ಹಾಗೆ ಮಾಡಿದರೆ ನಮ್ಮ ಮಸ್‌ಜಿದ್‌ಗಳು ಜನರಿಂದ ತುಂಬುವುವು. ನಮ್ಮ ನಮಾಝ್ ಸೆಂಟರ್‌ಗಳು ಜನರಿಂದ ತುಂಬುವುವು. ಅಂತಹ ಜನರು ಅಲ್ಲಾಹನ ಅನುಗ್ರಹ ಪಡೆಯುವರು. ಅವರು ತಮ್ಮ ನಡೆವಳಿಕೆಯ ಮೂಲಕ ಜಮಾಅತ್‌ಗೆ ತರಬೇತಿ ನೀಡುವವರೂ ಆಗುವರು. ಅಲ್ಲಹನ ಅನುಗ್ರಹಗಳಿಗೆ ವಾರೀಸುದಾರರಾಗುವರು. ಅವರ ಕೆಲಸಗಳು ಸುಲಭಗೊಳಿಸಲ್ಪಡುವುವು. ಅವರು ಕೇವಲ ಮಾತನಾಡುವವರಾಗಲಾರರು. ಆದುದರಿಂದ ಜಮಾಅತಿನ ಕೆಲಸ ಮಾಡುವವರು ಮೊದಲು ತಮ್ಮನ್ನು ಪರಿಶೋಧಿಸಬೇಕು. ತಮ್ಮ ನಡೆ ಹಾಗೂ ನುಡಿ ಎಷ್ಟರ ಮಟ್ಟಿಗೆ ಒಂದೇ ಆಗಿವೆ ಎಂದು ನೋಡಬೇಕು. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ: **ಯಾ ಅಯ್ಯುಹಲ್ಲಝೀನ ಆಮನೂ ಲಿಮ ತಖೂಲೂನ ಮಾ ಲಾ ತಫ್‌ಅಲೂನ್.** 'ಓ ಸತ್ಯ ವಿಶ್ವಾಸಿಗಳೇ ನೀವು ಮಾಡದೆ ಇರುವುದನ್ನು ಏಕೆ ಹೇಳುತ್ತಿರುವಿರಿ.'

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಪವಿತ್ರ ಖುರ್‌ಆನಿನ ಈ ವಚನವು ಲೋಕದಲ್ಲಿ ಒಂದು ಮಾತನ್ನು ಹೇಳಿ ಅದರ ಪ್ರಕಾರ ಮಾಡದವರು ಹಿಂದೆ ಇದ್ದರು, ಈಗ ಇದ್ದಾರೆ ಮುಂದೆ ಸಹ ಇರುವರು ಎಂಬುದನ್ನು ಸೂಚಿಸುತ್ತದೆ. ನೀವು ನನ್ನ ಮಾತು ಆಲಿಸಿರಿ ಮತ್ತು ಚೆನ್ನಾಗಿ ನೆನಪಿನಲ್ಲಿಟ್ಟುಕೊಳ್ಳಿರಿ, ಮನುಷ್ಯನು ಸತ್ಯವಾದ ಹೃದಯದಿಂದ ಮಾತನಾಡದಿದ್ದರೆ ಅದರಲ್ಲಿ ಕೆಲಸಮಾಡುವ ಶಕ್ತಿ ಇಲ್ಲದಿದ್ದರೆ ಅದು ಪ್ರಭಾವಶಾಲಿಯಾಗಲಾರದು.

ನಮ್ಮ ಮಾತು ಮತ್ತು ಕೆಲಸದಲ್ಲಿ ವೈರುಧ್ಯವಿರಬಾರದು. ಈ ವಿಷಯವನ್ನು ತಮ್ಮ ಮುಂದೆ ಇರಿಸಿ ತಮ್ಮನ್ನು ಪರಿಶೋಧಿಸಬೇಕಾದವರು ನಮ್ಮ ಹುದ್ದೇದಾರರಾಗಬೇಕಾಗಿದೆ. ಮನೆಗಳು ದೂರ ದೂರವಿರುವಲ್ಲಿ, ಅಥವಾ ಮನೆಗಳು ಕೆಲವೇ ಇರುವ ಸ್ಥಳದಲ್ಲಿ ನಮಾಝ್ ಸೆಂಟರ್ ಅಥವಾ ಮಸ್‌ಜಿದ್ ಇಲ್ಲದಿದ್ದರೆ, ಮನೆಗಳಲ್ಲಿ ನಮಾಝ್ ವ್ಯವಸ್ಥೆ ಮಾಡಬಹುದಾಗಿದೆ. ಇದು ಮಾಡಲಿಕ್ಕೆ ಕಷ್ಟವಾದುದೇನೂ ಅಲ್ಲ. ಆರಾಧನೆ ಮಾಡಬೇಕಾದುದು ಮೂಲಭೂತ ಆವಶ್ಯಕತೆಯಾಗಿದೆ. ಮನುಷ್ಯನನ್ನು ಸೃಷ್ಟಿಸಿರುವ ಉದ್ದೇಶವೇ ಇದೇ ಆಗಿದೆ. ಈ ಕಡ್ಡಾಯ ಕರ್ತವ್ಯ ನಾವು ನಿರ್ವಹಿಸಲೇಬೇಕಾಗಿದೆ. ಇದರ ಬಗ್ಗೆ ಉದಾಸೀನತೆ ಯಾರೂ ತೋರಿಸಬಾರದು. ವಿಶಿಷ್ಟವಾಗಿ ಹುದ್ದೇದಾರರು ಉದಾಸೀನತೆ ತೋರಿಸಲೇಬಾರದು. ಯಾವುದೇ ವಾಸ್ತವಿಕ ಸತ್ಯವಿಶ್ವಾಸಿ ಇದರಲ್ಲಿ ಉದಾಸೀನನಾಗಲಾರ. ಯಾವುದೇ ಹುದ್ದೇದಾರನನ್ನು ಆಫೀಸರನನ್ನಾಗಿ ಮಾಡುವ ಅಥವಾ ಮಾಡಿಸುವ ಉದ್ದೇಶದಿಂದ ಯಾವುದೇ ಸೇವೆಗೆ ನಿಯೋಜಿಸಲಾಗುವುದಿಲ್ಲ. ಇಸ್ಲಾಮಿನಲ್ಲಿ ಹುದ್ದೇದಾರನ ಕಲ್ಪನೆಯೇ ಸಂಪೂರ್ಣವಾಗಿ ವಿಭಿನ್ನವಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಇದನ್ನು ಹೀಗೆ ವರ್ಣಿಸಿರುವರು: ಜನರ ನಾಯಕ ಅವರ ಸೇವಕನಾಗಿದ್ದಾನೆ ಎಂದು. ಕೆಲವು ಸಾರಿ ಹುದ್ದೇದಾರರಿಗೆ ಕೆಲವು ಮಾತುಗಳನ್ನು ಕೇಳಬೇಕಾಗಿ ಬರುತ್ತದೆ. ಕೇಳಬೇಕಾಗಿ ಬಂದರೆ ಅವುಗಳನ್ನು ಕೇಳಬೇಕಾಗಿದೆ. ಆ ಮೂಲಕ ಅವರು ತನಗೆ ಸಹಿಸುವ ಶಕ್ತಿ ಎಷ್ಟರ ಮಟ್ಟಿಗೆ ಇದೆ ಎಂಬುದನ್ನು ಮತ್ತು ವಿನಯದಿಂದ ಎಷ್ಟರ ಮಟ್ಟಿಗೆ ವರ್ತಿಸಬಹುದೆಂಬುದನ್ನು ಮನವರಿಕೆ ಮಾಡಿಕೊಳ್ಳಬಹುದಾಗಿದೆ. ಕೆಲವು ಸಾರಿ ಹುದ್ದೇದಾರರಿಗೆ ಸಂಬಂಧಿಸಿದ ಎಂತಹ ವಿಷಯಗಳು ನಮ್ಮ ಮುಂದೆ ಬರುತ್ತವೆ ಎಂದರೆ ಅವರಿಗೆ ಸಹಿಸುವ ಶಕ್ತಿ ಇರುವುದೇ ಇಲ್ಲ. ಒಬ್ಬ ಅಸಭ್ಯತೆಯಿಂದ ವರ್ತಿಸುವುದನ್ನು ಕಂಡರೆ ಈ ಹುದ್ದೇದಾರರೂ ಸಹ ಹಾಗೆಯೇ ಉತ್ತರ ನೀಡುತ್ತಾರೆ. ಇಂತಹ ಉದಾಹರಣೆಗಳು ಕೆಲವು ಸ್ಥಳಗಳಿಂದ ನಮ್ಮ ಮುಂದೆ ಬಂದಿವೆ. ಮಸ್‌ಜಿದ್‌ಗಳಲ್ಲಿ ಜಗಳ ಪ್ರಾರಂಭವಾಗುತ್ತದೆ. ಇಂತಹ ಘಟನೆಗಳು ಮಕ್ಕಳ ಮೇಲೆ ಮತ್ತು ಯುವಕರ ಮೇಲೆ ಅತ್ಯಂತ ಕೆಟ್ಟ ಪ್ರಭಾವ ಬೀರುತ್ತದೆ.

ಕೆಲವೊಮ್ಮೆ ಕೇಂದ್ರದಿಂದ ಅಥವಾ ಹುದ್ದೇದಾರರೊಂದಿಗೆ ಕೆಲವು ವಿಷಯಗಳ ಬಗ್ಗೆ ವರದಿ ಕಳುಹಿಸಬೇಕೆಂದು ಆವಶ್ಯಪಡಲಾಗುತ್ತದೆ. ಅಂತಹ ಸಂದರ್ಭದಲ್ಲಿ ಬಹಳ ಅಜಾಗರೂಕತೆಯಿಂದ ರಿಪೋರ್ಟ್ ಬರೆದು ಕಳುಹಿಸುತ್ತಾರೆ. ಸರಿಯಾದ ರೀತಿಯಲ್ಲಿ ತಪಾಸಣೆ ನಡೆಸದೆ ರಿಪೋರ್ಟ್ ಕಳುಹಿಸುತ್ತಾರೆ. ವಿಷಯಗಳನ್ನು ಎಷ್ಟು ಸಮಯ ನೇತಾಡುತ್ತಾ ಇರುವಂತೆ ಮಾಡುತ್ತಾರೆಂದರೆ ಯಾರಾದರೂ ತಮ್ಮ ಯಾವುದಾದರೂ ಆವಶ್ಯಕತೆಯನ್ನು ಈಡೇರಿಸಬೇಕೆಂದು ಬೇಡಿಕೊಂಡು ಅಪೇಕ್ಷಿಸಿದರೆ, ಅವರ ಅಪೇಕ್ಷೆ ಆವಶ್ಯಕತೆ ಇರುವಾಗ ಈಡೇರದಿರುವ ಕಾರಣ ಅವರಿಗೆ ಹಾನಿ ಸಂಭವಿಸುತ್ತದೆ. ಅಥವಾ ಅವರು ಕಷ್ಟವನ್ನು ಅನುಭವಿಸಬೇಕಾಗುತ್ತದೆ. ಕೆಲವು ಹುದ್ದೇದಾರರು ತಮಗೆ ಬಿಡುವಿರುವುದಿಲ್ಲ ಎಂದು ನೆವನ ಹೇಳುತ್ತಾರೆ. ಬೇರೆ ಕೆಲವರಿಗೆ ನೆವನಗಳಿರುವುದಿಲ್ಲ. ಅವರು ಕೇವಲ ನಿರ್ಲಕ್ಷ್ಯತೆ ಹೊಂದಿರುತ್ತಾರೆ. ಆದರೆ ಅದು ಅವರಿಗೆ ಸಂಬಂಧಿಸಿದ ವಿಷಯಗಳಾಗಿದ್ದಲ್ಲಿ ಅವರು ನೀಡುವ ಆದ್ಯತೆ ಬೇರೆ ರೀತಿಯಲ್ಲಿರುತ್ತದೆ. ವಾಸ್ತವಿಕವಾಗಿ ಹುದ್ದೇದಾರರಿಗೆ ಸೇವೆ ಮಾಡುವ ಮನೋಭಾವವಿರಬೇಕು. ತ್ಯಾಗ ಮನೋಭಾವವಿರಬೇಕು. ತಮಗೆ ವಹಿಸಿಕೊಟ್ಟ ಅಮಾನತ್‌ಗೆ ಸಂಬಂಧಿಸಿದ ಕರ್ತವ್ಯಗಳನ್ನು ಈಡೇರಿಸುವ ಮನೋಭಾವವಿರಬೇಕು. ಅನ್ಯರ ಆವಶ್ಯಕತೆಗಳಿಗೋಸ್ಕರ ಚಿಂತಿಸುವ ಮನೋಭಾವವಿರಬೇಕು. ತ್ಯಾಗ ಮನೋಭಾವವಿರಬೇಕು. ಅನ್ಯರ ಕಷ್ಟವನ್ನು ತನ್ನ ಕಷ್ಟವೆಂದು ಪರಿಗಣಿಸಿ ಕೆಲಸ ಮಾಡುವುದಾದರೆ ಜಮಾಅತಿನ ವ್ಯಕ್ತಿಗಳಲ್ಲಿಯೂ ಅವರ ತ್ಯಾಗದ ಮಟ್ಟ ವರ್ಧಿಸುವುದು. ಒಬ್ಬರಿನ್ನೊಬ್ಬರ ಹಕ್ಕನ್ನು ಕಸಿದುಕೊಳ್ಳುವುದಕ್ಕೆ ಬದಲಾಗಿ ಅನ್ಯರ ಹಕ್ಕುಗಳನ್ನು ಕೊಡುವ ಬಗ್ಗೆ ಶ್ರದ್ಧೆ ಉಂಟಾಗುವುದು. ಲೋಕದಲ್ಲಿ ಶಾಂತಿ ಸ್ಥಾಪಿತವಾಗಬೇಕಾದರೆ ಪ್ರತಿಯೊಂದು ಹಂತದಲ್ಲಿ ಅನ್ಯರ ಹಕ್ಕನ್ನು ತೆಗೆದು ಕೊಳ್ಳುವ ಮತ್ತು ಹಕ್ಕನ್ನು ಕಿತ್ತು ಕೊಳ್ಳುವುದಕ್ಕೆ ಬದಲಾಗಿ ಅನ್ಯರ ಹಕ್ಕುಗಳನ್ನು ಕೊಡುವ ಮತ್ತು ತ್ಯಾಗ ಮನೋಭಾವವಿರಬೇಕು ಎಂದು ನಾವು ಇತರರಿಗೆ ಹೇಳುತ್ತೇವೆ. ಆದರೆ ನಮ್ಮೊಳಗೆ ನಾವು ಈ ಮನೋಭಾವವನ್ನು ಹೊಂದಿರುವುದಿಲ್ಲವಾದರೆ ನಾವು ಅಲ್ಲಾಹನಿಗೆ ಇಷ್ಟವಿಲ್ಲದ ಕೆಲಸ ಮಾಡುತ್ತಿದ್ದೇವೆಂದು ಅರ್ಥವಾಗುತ್ತದೆ.

ಹುದ್ದೇದಾರರಲ್ಲಿ ಇರಬೇಕಾದ ಇನ್ನೊಂದು ವಿಶಿಷ್ಟ ಗುಣ ವಿನಯವಾಗಿದೆ. ಯಾವುದಾದರೂ ಹುದ್ದೇದಾರನ ಹೃದಯದಲ್ಲಿ ತನಗೆ ದೊರಕಿದ ಹುದ್ದೆಯ ಕಾರಣದಿಂದ ಯಾವುದೇ ರೀತಿಯ ಹೆಮ್ಮೆ ಮತ್ತು ಅಹಂಭಾವ ತಲೆದೋರುವುದಾದರೆ ಅವನು ನೆನಪಿಟ್ಟುಕೊಳ್ಳಬೇಕು

ಇದು ಅವನನ್ನು ಅಲ್ಲಾಹನಿಂದ ದೂರ ಸರಿಸುತ್ತದೆ. ಅಲ್ಲಾಹನಿಂದ ಮನುಷ್ಯನು ದೂರ ಸರಿದಾಗ ಅವನ ಕೆಲಸದಲ್ಲಿ ಅನುಗ್ರಹವಿರುವುದಿಲ್ಲ. ಅಂತಹ ವ್ಯಕ್ತಿ ಜಮಾಅತಿಗೆ ಪ್ರಯೋಜನ ಉಂಟುಮಾಡುವುದಕ್ಕೆ ಬದಲಾಗಿ ಹಾನಿಯನ್ನುಂಟು ಮಾಡುವವನಾಗುತ್ತಾನೆ.

ಕೆಲವು ಜನರು ಸಾಮಾನ್ಯವಾಗಿ ಬಹಳ ವಿನಯದಿಂದ ವರ್ತಿಸುತ್ತಾರೆ. ಆದರೆ ತಮ್ಮ ಅಧೀನನಾದ ವ್ಯಕ್ತಿಯೊಂದಿಗೆ ಅಥವಾ ಸಾಮಾನ್ಯನಾದ ವ್ಯಕ್ತಿಯೊಂದಿಗೆ ಅಭಿಪ್ರಾಯ ವ್ಯತ್ಯಾಸ ತಲೆದೋರಿದಾಗ ಕೂಡಲೆ ಅವರ ಅಧಿಕಾರದ ಹೆಮ್ಮೆ ಉದ್ರೇಕಗೊಳ್ಳುತ್ತದೆ. ತಾನು ದೊಡ್ಡ ಹುದ್ದೇದಾರನೆಂಬ ಯೋಚನೆಯಿಂದ ತನ್ನ ಅಧೀನ ವ್ಯಕ್ತಿಯೊಂದಿಗೆ ಅಹಂಭಾವದಿಂದ ವರ್ತಿಸುತ್ತಾರೆ. ಅವರದ್ದು ಸರಿಯಾದ ವಿನಯವಲ್ಲ. ಅದು ಕಪಟ ವಿನಯವಾಗಿರುತ್ತದೆ. ಅವರ ವಾಸ್ತವಿಕ ಸ್ಥಿತಿ ತಿಳಿದು ಬರುವುದು ಅವರು ಭಿನ್ನಾಭಿಪ್ರಾಯ ಹೊಂದಿದಾಗ ಮತ್ತು ತನ್ನ ಅಧೀನನಾಗಿರುವವನು ತನ್ನ ಇಚ್ಛೆಗೆ ವಿರುದ್ಧವಾಗಿ ಮಾತನಾಡಿದಾಗ ಆಗಿರುತ್ತದೆ. ಹುದ್ದೇದಾರರು ನ್ಯಾಯಪೂರ್ಣವಾಗಿ ವರ್ತಿಸಿ ಭಿನ್ನಾಭಿಪ್ರಾಯಗಳನ್ನು ಚೆನ್ನಾಗಿ ಪರಾಂಬರಿಸಿ ನೋಡಿ ಅದರಲ್ಲಿ ನ್ಯಾಯಯುತ ತೀರ್ಮಾನ ಕೈಗೊಳ್ಳಬೇಕಾಗಿದೆ.

ಹುದ್ದೇದಾರರಲ್ಲಿರಬೇಕಾದ ಇನ್ನೊಂದು ವೈಶಿಷ್ಟ್ಯವೇನೆಂದರೆ ಅವರು ತಮ್ಮ ಕೈ ಕೆಳಗಿರುವವರೊಂದಿಗೆ ಉತ್ತಮವಾದ ರೀತಿಯಲ್ಲಿ ವರ್ತಿಸಬೇಕು. ಅವರು ತಮ್ಮ ಸಹಾಯಕರಿಗೂ ಅಧೀನ ಕೆಲಸ ಮಾಡುವವರಿಗೂ ಕೆಲಸಗಳನ್ನು ಕಲಿಸಲು ಪ್ರಯತ್ನ ಮಾಡಬೇಕು. ಹಾಗೆ ಮಾಡಿದರೆ ಜಮಾಅತಿನ ಕೆಲಸವನ್ನು ಉತ್ತಮ ರೀತಿಯಲ್ಲಿ ಚಲಾಯಿಸಲು ಯಾವಾಗಲೂ ಕಾರ್ಯಕರ್ತರು ಲಭಿಸುತ್ತಾ ಇರುವರು. ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸರ (ತೃತೀಯ ಖಲೀಫರ) ಕಾಲದಲ್ಲಿ ಒಬ್ಬ ಹುದ್ದೇದಾರ ಹೀಗೆ ಯೋಚಿಸುತ್ತಿದ್ದರು. ನಾನು ರೂಪಿಸಿದ ಕಾರ್ಯಯೋಜನೆಯಿಂದ ಮತ್ತು ನಾನು ಮಾಡಿದ ದುಡಿಮೆಯಿಂದ ಜಮಾಅತಿನ ಆರ್ಥಿಕ ವ್ಯವಸ್ಥೆ ಉತ್ತಮ ರೀತಿಯಲ್ಲಿ ನಡೆಯುತ್ತಾ ಇದೆ ಎಂದು. ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್‌ರವರಿಗೆ ಈ ವಿಷಯ ತಿಳಿದಾಗ ಅವರು ಕೂಡಲೆ ಆ ಹುದ್ದೇದಾರನನ್ನು ಬದಲಾಯಿಸಿದರು. ಆ ಹುದ್ದೇದಾರನ ಸ್ಥಾನದಲ್ಲಿ ಆರ್ಥಿಕ ವ್ಯವಸ್ಥೆ ಬಗ್ಗೆ ಏನೂ ತಿಳಿದಿಲ್ಲದ ಓರ್ವ ವ್ಯಕ್ತಿಯನ್ನು ನಿಯಮಿಸಿದರು. ಆದರೆ ಜಮಾಅತಿನ ಕೆಲಸವನ್ನು ಅಲ್ಲಾಹನೇ ಚಲಾಯಿಸುತ್ತಿರುವುದರಿಂದ ಮತ್ತು ಆಯಾಕಾಲದ ಖಲೀಫರೊಂದಿಗೆ ಅಲ್ಲಾಹನು ವರ್ತಿಸುವ ರೀತಿಯ ಕಾರಣ ಹೊಸದಾಗಿ ನೇಮಿಸಲ್ಪಟ್ಟ ಆ ಹುದ್ದೇದಾರನ ಕೆಲಸದಲ್ಲಿ ಅಲ್ಲಾಹನು ಎಷ್ಟು ಅನುಗ್ರಹ ನೀಡಿದನೆಂದರೆ, ಹಿಂದೆಂದೂ ಅದರ ಬಗ್ಗೆ ಯೋಚಿಸಲು ಸಹ ಸಾಧ್ಯವಿರಲಿಲ್ಲ. ಆದುದರಿಂದ ಹುದ್ದೇದಾರರಿಗೆ ಅಲ್ಲಾಹನು ಸೇವೆ ಮಾಡಲು ಸಂದರ್ಭ ಒದಗಿಸುತ್ತಾನೆ. ಜಮಾಅತಿನ ಕಾರ್ಯಕರ್ತರಿಗೆ ಅಲ್ಲಾಹನು ಜಮಾಅತಿನ ಸೇವೆ ಮಾಡಲು ಸಂದರ್ಭ ನೀಡುತ್ತಾನೆ. ವಾಕಿಫೇ ಝಿಂದಗೀ (ಜಮಾಅತಿನ ಸೇವೆಗೋಸ್ಕರ ಜೀವಿತವನ್ನು ಅರ್ಪಿಸಿದವರು) ಜಮಾಅತಿನ ಮತ್ತು ಧರ್ಮದ ಸೇವೆ ಮಾಡಿ ಅಲ್ಲಾಹನ ಅನುಗ್ರಹಗಳಿಗೆ ವಾರೀಸುದಾರರಾಗಲು ಅಲ್ಲಾಹನು ಸಂದರ್ಭ ಒದಗಿಸುತ್ತಾನೆ. ವಾಸ್ತವಿಕವಾಗಿ ಕೆಲಸ ಮಾಡುವುದು ಅಲ್ಲಾಹನೇ. ಇದು ಅವನ ವಾಗ್ದಾನ ಪ್ರಕಾರವಾಗಿದೆ. ಆದುದರಿಂದ ಯಾರೂ ತಮ್ಮ ಹೃದಯದಲ್ಲಿ ಹೀಗೆ ಯೋಚಿಸಬಾರದು: ನನ್ನ ಜ್ಞಾನ ಮತ್ತು ನನ್ನ ಅನುಭವ ಜಮಾಅತಿನ ಕೆಲಸಗಳನ್ನು ಚಲಾಯಿಸುತ್ತದೆ ಎಂದು.

ಹುದ್ದೇದಾರರಲ್ಲಿರಬೇಕಾದ ಇನ್ನೊಂದು ಗುಣವೇನೆಂದರೆ ಅವರು ಯಾವಾಗಲೂ ಸಂತೋಷಭರಿತರಾಗಿರಬೇಕು, ಇತರರೊಂದಿಗೆ ಯಾವಾಗಲೂ ಸುಸ್ವಭಾವದಿಂದ ವರ್ತಿಸಬೇಕು ಎಂಬುದಾಗಿದೆ. ಅಲ್ಲಾಹನು ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ: **ವ ಖೂಲೂ ಲಿನ್ನಾಸಿ ಹುಸ್‌ನನ್.** ನೀವು ಜನರೊಂದಿಗೆ ಮೃದುವಾಗಿ ಮತ್ತು ಸುಸ್ವಭಾವದಿಂದ ವರ್ತಿಸಿರಿ. ಇದು ಹುದ್ದೇದಾರರಲ್ಲಿರಬೇಕಾದ ಒಂದು ಮೂಲಭೂತ ಸ್ವಭಾವಗುಣವಾಗಿದೆ. ತಮ್ಮ ಕೈ ಕೆಳಗೆ ಮತ್ತು ತಮ್ಮೊಂದಿಗೆ ಕೆಲಸ ಮಾಡುವವರೊಂದಿಗೆ ಮಾತನಾಡುವಾಗ ಮತ್ತು ಅದೇ ರೀತಿ ಬೇರೆ ಜನರೊಂದಿಗೆ ಮಾತನಾಡುವಾಗಲೂ ನೆನಪಿಡಬೇಕಾದುದೇನೆಂದರೆ ಅವರು ತಮ್ಮ ಉನ್ನತವಾದ ಸ್ವಭಾವ ಗುಣಗಳನ್ನು ಪ್ರಕಟಿಸಬೇಕು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಾವು ನೇಮಿಸಿದ ಯಮನಿನ ಅಧಿಕಾರಿಗಳಿಗೆ ಹೀಗೆ ಉಪದೇಶಿಸಿದರು: 'ನೀವು ಜನರಿಗೆ ಅನುಕೂಲತೆಗಳನ್ನು ಒದಗಿಸಬೇಕು. ಅವರಿಗೆ ಕಷ್ಟಕೊಡಬಾರದು. ಪ್ರೀತಿ ಮತ್ತು ಸಂತೋಷವನ್ನು ಹರಡಬೇಕು. ತಾತ್ಸಾರ ಭಾವನೆಯನ್ನು ಬೆಳೆಯಲು ಬಿಡಬಾರದು.' ಇದು ಎಂತಹ ಉಪದೇಶವೆಂದರೆ ಹುದ್ದೇದಾರರು ಮತ್ತು ಜಮಾಅತಿನ ಇತರ ಸದಸ್ಯರ ಮಧ್ಯದ ಸಂಬಂಧದಲ್ಲಿ ಇದು ಸೌಂದರ್ಯ ಸೃಷ್ಟಿಸುವುದು. ಅದರ ಪರಿಣಾಮವಾಗಿ ಜಮಾಅತಿನ ಜನರಲ್ಲಿ ಒಬ್ಬರಿನ್ನೊಬ್ಬರ ಭಾವನೆಗಳಿಗೆ ಲಕ್ಷ್ಯ ನೀಡುವ ಮನೋಭಾವ ಬೆಳೆಯುವುದು.

ಅಮೀರರ, ಅಧ್ಯಕ್ಷರ ಮತ್ತು ಸೆಕ್ರಟರಿಗಳ ಮುಖ್ಯ ಕೆಲಸ ಇದು ಕೂಡ ಆಗಿದೆ. ಅಂದರೆ ಕೇಂದ್ರದಿಂದ ಬರುವ ಸರ್ಕ್ಯುಲರ್‌ಗಳ ಬಗ್ಗೆ ಕೂಡಲೆ ಜಮಾಅತಿನ ಮುಖಾಂತರ ಕಾರ್ಯ ಯೋಜನೆಗಳನ್ನು ಮಾಡಬೇಕು. ಕೆಲವು ಜಮಾಅತ್‌ಗಳು ಕೇಂದ್ರದ ಮಾರ್ಗದರ್ಶನಗಳನ್ನು ಪೂರ್ಣವಾಗಿ ಪಾಲಿಸುವುದಿಲ್ಲ ಎಂದು ದೂರುಗಳು ಬರುತ್ತವೆ. ತಮ್ಮ ಬುದ್ಧಿ ಬಳಸಿ ಈ ಮಾರ್ಗದರ್ಶನಗಳನ್ನು ನಿರ್ಲಕ್ಷಿಸುವುದು ಅವುಗಳ ಪ್ರಕಾರ ವರ್ತಿಸದೆ ಇರುವುದು ಕೇಂದ್ರಕ್ಕೆ ವರದಿ ಕಳುಹಿಸದೆ ಇರುವುದು ಸರಿಯಾದ ಕ್ರಮವಲ್ಲ. ವಸಿಯ್ಯತ್ ಮಾಡಿದ ಮೂಸಿಗಳು ತಮ್ಮ ಚಂದದ ಪಾವತಿ ಸ್ವತಃ ಲೆಕ್ಕ ಇಟ್ಟುಕೊಳ್ಳುವುದು ಅವರ ಜವಾಬ್ದಾರಿಯಾಗಿದೆ. ಕೇಂದ್ರದ ಸೆಕ್ರಟರಿ ಸಹ ಸರಿಯಾದ ಲೆಕ್ಕ ಇಟ್ಟುಕೊಳ್ಳಬೇಕು ಮತ್ತು ಚಂದದ ಬಗ್ಗೆ ಮೂಸಿಗಳಿಗೆ ನೆನಪಿಸುತ್ತಾ ಇರಬೇಕು.

ಮುಬಲ್ಲಿಗ್ ಮತ್ತು ಮುರಬ್ಬಿಗಳ ಬಗ್ಗೆ ಹೇಳುವುದಾದರೆ ಕೆಲವು ಸ್ಥಳಗಳಲ್ಲಿ ಮುಬಲ್ಲಿಗರ ಮತ್ತು ಮುರಬ್ಬಿಗಳ ಸಭೆಗಳು ಕ್ರಮಬದ್ಧವಾಗಿ ಪ್ರತಿ ತಿಂಗಳು ಜರಗುವುದಿಲ್ಲ. ಈ ಸಭೆಗಳನ್ನು ಜರಗಿಸುವುದು ಮುಬಲ್ಲಿಗ್ ಇನ್‌ಚಾರ್ಜ್ ಮಾಡಬೇಕಾದ ಕೆಲಸವಾಗಿದೆ. ಜಮಾಅತ್ ನಡೆಸಿದ ತರ್‌ಬಿಯತ್ ಮತ್ತು ತಬ್‌ಲೀಗ್ ಕಾರ್ಯಗಳ ಬಗ್ಗೆ ಪರಿಶೀಲನೆ ನಡೆಸಿ ಅತ್ಯುತ್ತಮ ಕೆಲಸ ಮಾಡಿದವರ ಬಗ್ಗೆ ವಿಚಾರ ವಿನಿಮಯ ನಡೆಸಬೇಕು. ಇದೇ ರೀತಿ ಜಮಾಅತ್ ಸೆಕ್ರಟರಿಗಳು ಕೇಂದ್ರದ ಮಾರ್ಗದರ್ಶನಗಳನ್ನು ಕಾರ್ಯರೂಪಕ್ಕೆ ತಂದ ಬಗ್ಗೆ ರಿಪೋರ್ಟ್ ನೀಡಬೇಕು. ಪ್ರತಿಯೊಂದು ಜಮಾಅತ್‌ನಲ್ಲಿ ಸೆಕ್ರಟರಿಗಳು ಎಷ್ಟು ಕ್ರಿಯಾಶೀಲರಾಗಿದ್ದಾರೆಂದು ನೋಡಿಕೊಂಡು ತರ್‌ಬಿಯತ್, ತಬ್ಲೀಗ್ ಮತ್ತು ಸಾಂಪತ್ತಿಕ ತ್ಯಾಗದ ಬಗ್ಗೆ ಮುಬಲ್ಲಿಗರೂ ಮುರಬ್ಬಿಗಳೂ ವಿಶಿಷ್ಟವಾಗಿ ಸೆಕ್ರಟರಿಗಳು ಗಮನ ಹರಿಸಬೇಕು.

ಅಲ್ಲಾಹನು ಎಲ್ಲ ಹುದ್ದೇದಾರರಿಗೆ ಮುಂದಿನ ಮೂರು ವರ್ಷಗಳ ಕಾಲ ಜಮಾಅತಿಗೆ ಸೇವೆ ಸಲ್ಲಿಸುವ ಸಂದರ್ಭ ಒದಗಿಸಿಕೊಟ್ಟಿದ್ದಾನೆ. ಅವರು ಎಲ್ಲ ಕೆಲಸಗಳನ್ನು ತಮ್ಮ ಪೂರ್ಣ ಶಕ್ತಿ ಸಾಮರ್ಥ್ಯಗಳೊಂದಿಗೆ ಈಡೇರಿಸುವ ಭಾಗ್ಯವನ್ನು ಅಲ್ಲಾಹನು ಅವರಿಗೆ ನೀಡಲಿ. ಅವರು ತಮ್ಮ ಮಾತುಗಳಲ್ಲಿಯೂ ಕೆಲಸಗಳಲ್ಲಿಯೂ ಜಮಾಅತ್‌ನಲ್ಲಿ ಇತರರಿಗೆ ಮಾದರಿಯಾಗುವಂತಾಗಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 15-07-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email:*** *khutuba.kannada@gmail.com*

**You can find all the Sermons archived at**: www.alislam.org/friday-sermon